# ಅಕ್ಕ ಐ.ಎ.ಎಸ್ ಕನ್ನಡ ಅಕಾಡೆಮಿ, ಬೆಂಗಳೂರು

KANNADA
(Literature)
Weekly Test- 1

Time Allowed: 2.15 Hours

Maximum Marks: 200

- ಎಲ್ಲಾ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಬೇಕು.
- ಉತ್ತರಗಳನ್ನು ಅಗತ್ಯವಾಗಿ ಕನ್ನಡದಲ್ಲಿಯೇ ಬರೆಯಬೇಕು.

1.

**a)** ಭಾಷೆಯ ಚಲನಶೀಲತೆಯನ್ನು ಧ್ವನಿ ಮತ್ತು ಅರ್ಥಗಳ ಬದಲಾವಣೆಯಲ್ಲಿ ಗುರುತಿಸಿ. 15

b) ಭಾಷಾಸ್ವೀಕರಣದ ಪ್ರಕ್ರಿಯೆಯಲ್ಲಿ ಕನ್ನಡ ಭಾಷೆಗೆ ಆಗಿರುವ ಲಾಭ–ನಷ್ಟಗಳನ್ನು ಚರ್ಚಿಸಿ. 15

c) ಕನ್ನಡ ಭಾಷೆಯ ಪ್ರಾಚೀನತೆಯನ್ನು ಗುರುತಿಸಿ. 10

d) ಉಪಭಾಷೆಗಳ ಬೆಳವಣಿಗೆಗೆ ಜಾಗತೀಕರಣ ತಡೆಯೊಡ್ಡುತ್ತಿದೆಯೇ? ಚರ್ಚಿಸಿ. 10

2 .

a) ಕನ್ನಡ ಭಾಷೆಯ ಉಗಮ ಮತ್ತು ವಿಕಾಸದ ವಿವಿಧ ಹಂತಗಳನ್ನು ಸೋದಾಹರಣವಾಗಿ ವಿವೇಚಿಸಿರಿ. 15

b) ಕನ್ನಡಕ್ಕೆ ಬಂದ ಅನ್ಯದೇಶ್ಯ ಪದಗಳ ಧ್ವನಿ ಮತ್ತು ಅರ್ಥಬದಲಾವಣೆಯನ್ನು ಸೋದಾಹರಣವಾಗಿ ಗುರುತಿಸಿ. 15

c) ಕನ್ನಡ ಭಾಷೆಯ ಅವಸ್ಥಾಂತರದ ಕಾಲವನ್ನು ಕುರಿತಂತೆ ನಡೆದಿರುವ ಚರ್ಚೆಯನ್ನು ನೀಡಿ. 10

d) ಭಾಷೆ ಎಂದರೇನು? ವ್ಯಾಖ್ಯಾನಿಸಿ. 10

3.

a) ದ್ರಾವಿಡ ಭಾಷಾ ಪರಿವಾರವನ್ನು ಪರಿಚಯಿಸಿ, ಅವುಗಳ ವಿಶೇಷತೆಗಳನ್ನು ಗುರುತಿಸಿ. 15

b) ಕನ್ನಡಲ್ಲಿ ಬೆಳೆದು ಬಂದಿರುವ ಮೈಸೂರು ಮತ್ತು ಧಾರವಾಡ ಉಪಭಾಷೆಗಳ ಲಕ್ಷಣಗಳೇನು? ನಿರೂಪಿಸಿ. 15

c) ಭಾಷೆಯ ಮೂಲಭೂತ ಲಕ್ಷಣಗಳು ಯಾವುವು? 10

d) ಸಾಮಾಜಿಕ ಉಪಭಾಷೆಗಳು ಅಸ್ತಿತ್ವದಲ್ಲಿವೆಯೇ? ಚರ್ಚಿಸಿ. 10

4.

a) ದ್ರಾವಿಡ ಭಾಷಾಗುಂಪಿನಲ್ಲಿ ಕನ್ನಡ ಭಾಷೆಯ ವೈಲಕ್ಷಣ್ಯಗಳನ್ನು ಸಾಧಾರವಾಗಿ ಪಟ್ಟಿಮಾಡಿ. 15

b) ಕಲಬುರ್ಗಿ ಹಾಗೂ ಮಂಗಳೂರು ಕನ್ನಡ ಉಪಭಾಷೆಗಳ ವಿಶೇಷತೆಗಳನ್ನು ಗುರುತಿಸಿ. 15

c) ಕನ್ನಡ ಮತ್ತು ಸಂಸ್ಕೃತಗಳ ನಡುವಿನ ಭಾಷಿಕ ಹಾಗೂ ಸಾಹಿತ್ಯಕ ಸಂಬಂಧಗಳನ್ನು ಗುರುತಿಸಿ. 10

d) ಕನ್ನಡ ಪದದ ನಿಷ್ಪತ್ತಿ. 10